Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ದಾನ ಮಾಡುವ ಅವಕಾಶ ನಮಗೂ ಸಿಕ್ಕಿತು!

**ಮಂಜುನಾಥ ಉಪ್ಪಾರ**
ಎಂ.ಎ, ಪಿಎಚ್.ಡಿ., ಸಮಾಜಶಾಸ್ತ್ರ,
ತೃತೀಯ ಸೆಮಿಸ್ಟರ್,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ,
ವಿದ್ಯಾರಣ್ಯ-583276
ಮೊ.ಸಂ-9481652198, e-mail : manjunath1996@gmial.com

**ಪ್ರಸ್ತಾವನೆ.**

'ದಾನ' ಎಂಬುದು ಎರಡಕ್ಷರಗಳುಳ್ಳ ಪದ. ಅದು ಒಂದು ಸಣ್ಣ ಶಬ್ದವೆಂಬಂತೆ ಕಂಡರೂ ಸಹ ಸಮಾಜದ ಸಹಕಾರ ಮನೋಭಾವನೆ, ಮಾನವನ ಗುಣ, ಸಮಾನತೆಯನ್ನು ಸಾರುತ್ತದೆ. ದಾನದ ಕೆಲಸ ಬಹುಗುರುತರವಾದದು ಮತ್ತು ಬಹುತ್ವವಾದುದು. ದಾನವು ಯಾವುದೇ ಇರಲಿ ಅದು ಕೊಡುವ ವ್ಯಕ್ತಿಯ ಒಳ್ಳೆಯ ಭಾವನೆಯನ್ನು ಅಪೇಕ್ಷಿಸುವುದು. ತೆಗೆದುಕೊಳ್ಳುವ ವ್ಯಕ್ತಿಗೆ ಅದು ಒಳ್ಳೆಯದಾಗಲಿ, ಆಸರೆಯಾಗಲಿ ಎಂಬ ಆಶಯ ಇರುತ್ತದೆ. ಅಂದರೆ ದಾನದಲ್ಲಿ ಕೊಡುವ ವ್ಯಕ್ತಿ ಅಥವಾ ಸಂಸ್ಥೆ ಮತ್ತು ಸ್ವೀಕರಿಸುವ ವ್ಯಕ್ತಿ ಅಥವಾ ಸಂಸ್ಥೆ ಎಂಬ ಎರಡು ವಿಧಗಳಿರುವುದು ಸಾಮಾನ್ಯವಾಗಿರುತ್ತದೆ. ಕೊಡುವ ವ್ಯಕ್ತಿಯ ಭಾವನೆಯಲ್ಲಿ ದುರುದ್ದೇಶವಿದ್ದರೆ ಆ ಕ್ರಿಯೆಯನ್ನು ದಾನವೆಂದು ಪರಿಗಣಿಸುವುದಿಲ್ಲ. ದಾನದ ಬದಲಾಗಿ ಅದು ಮೋಸವೆನಿಸಬಹುದು. ಆದರೆ ಸ್ವೀಕರಿಸುವವರ ಭಾವನೆ ಒಳ್ಳೆಯದಾಗಿರಬೇಕೆಂಬ ನಿಯಮವೇನಿಲ್ಲ.

ಭಾರತೀಯ ಸಮಾಜದಲ್ಲಿ ದಾನಕ್ಕೆ ವಿಶೇಷವಾದ ಸ್ಥಾನವಿದೆ. ದಾನಗಳಲ್ಲಿ ಹಲವಾರು ವಿಧಗಳನ್ನು ಕಾಣಬಹುದು, ಒಂದೊಂದು ವಿಧದಲ್ಲಿ ತ್ಯಾಗದ ಪ್ರಮಾಣ ಬದಲಾಗುತ್ತದೆ. ಹೊರ ಪದಾರ್ಥಗಳನ್ನು ಇಲ್ಲವೇ ವಸ್ತುಗಳನ್ನು ಗಳಿಸಿ ಅವುಗಳನ್ನು ಬೇರೆಯವರಿಗೆ ಕೊಡುವುದು ಒಂದು ಪ್ರಕಾರವಾಗಿದೆ. ಇ3ದರಲ್ಲಿ ಅನ್ನದಾನ, ಧಾನ್ಯದಾನ, ಗೋದಾನ, ಭೂದಾನ ಇತ್ಯಾದಿಗಳು ಬರುತ್ತವೆ. ತನ್ನಲ್ಲಿಯೇ ಶೇಖರಗೊಂಡಿರುವ ವಸ್ತುಗಳನ್ನು ಇತರರಿಗೆ ಹಂಚುವುದು ಇನ್ನೊಂದು ಪ್ರಕಾರದ ದಾನ. ಇದರಲ್ಲಿ ವಿದ್ಯಾದಾನ, ಬುದ್ದಿದಾನ ಮುಂತಾದವುಗಳು ಬರುತ್ತದೆ. ತನ್ನ ಜೀವಕ್ಕೆ ಅತೀ ನಿಕಟವಾಗಿರುವಂಥ ವಸ್ತುಗಳನ್ನು ಕೊಡುವುದು ಮತ್ತೊಂದು ಪ್ರಕಾರದ ದಾನ. ಇಲ್ಲಿ ಕನ್ಯಾದಾನ, ಪುತ್ರದಾನ ಬರುತ್ತವೆ. ದೇಹದ ಅಂಗಗಳನ್ನೇ ದಾನ ಮಾಡಬಹುದಾದ ಪ್ರಸಂಗಗಳು ಬರುತ್ತವೆ. ಈ ಪ್ರಕಾರದಲ್ಲಿ ರಕ್ತದಾನ, ನೇತ್ರದಾನ, ಅಸ್ಥಿಮಜ್ಜೆದಾನ, ವೀರ್ಯದಾನ ಮುಂತಾದವು ಬರುತ್ತವೆ ಇಲ್ಲಿಯೂ ಕೂಡಾ ತ್ಯಾಗದ ಎತ್ತರ ಉನ್ನತ ಮಟ್ಟದ್ದಾಗಿರುತ್ತದೆ. ಹಾಗೆಯೇ ಇನ್ನೊಂದು ಪ್ರಕಾರದ ದಾನವೆಂದರೇ ಮರಣೋತ್ತರದಾನ. ಇ ಪ್ರಕಾರದಲ್ಲಿ ಹೃದಯದಾನ, ಪುಪ್ಪುಸದಾನ, ಯಕೃತ ದಾನ ಇತ್ಯಾದಿಗಳಾಗಿವೆ.

ಈ ಎಲ್ಲಾ ದಾನಗಳಿಗೂ ಸರಿಸಮಾನವಾಗಿ ನಿಲ್ಲುವ ಇನ್ನೊಂದು ದಾನವಿದೆ. ಆ ದಾನದ ಬಗ್ಗೆ ನಮಗೆ ನಿರ್ದೇಶನ ನೀಡಿದವರು ಡಾ. ಯರ್ರಿಸ್ವಾಮಿ ಈ. ಅವರು ನಮಗೆ ನಾವೆಲ್ಲರೂ ಸೇರಿ ದಿನದಲ್ಲಿ ಒಂದು ಘಂಟೆ ಒಳ್ಳೆಯ ಸಮಾಜ ಮುಖಿಯಾದ ಕಾರ್ಯ ಮಾಡಬೇಂದು ನಮಗೂ ಕೂಡಾ ದಾನ ಮಾಡುವ ಅವಕಾಶ ಮಾಡಿಕೊಟ್ಟರು. ಆ ಅವಕಾಶ ಮಾಡಿಕೊಟ್ಟ ದಾನವೇ 'ಶ್ರಮದಾನ' .

ಈ ಮೊದಲೇ ಹೇಳಿದ ದಾನದ ಪ್ರಕಾರಗಳಲ್ಲಿ ಕೆಲವೊಂದು ದಾನಗಳು ಪ್ರತಿಪಲಾಪೇಕ್ಷೆಯನ್ನು ಇಟ್ಟುಕೊಂಡು ಮಾಡಿದ ದಾನಗಳಾಗಿರುತ್ತವೆ. ಆದರೇ ಶ್ರಮದಾನ ಎನ್ನುವುದು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ತನು ಮನದಿಂದ ಮಾಡುವ ದಾನವಾಗಿದೆ. ಆದರೆ ಎಲ್ಲಾ ದಾನಗಳು ಸಮಾಜಮುಖಿಯಾಗಿರುತ್ತವೆ ಎಂದು ನಂಬುವುದು ಕಷ್ಟಸಾಧ್ಯ. ಶ್ರಮದಾನ ಎಂಬುವುದನ್ನು ಮೊದಲಿಗೆ ಕಾರ್ಯರೂಪಕ್ಕೆ ತಂದವರು ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು. ಇವರು ಕೇವಲ ಬಾಯಿಯ ಮೂಲಕ ನಾಲಿಗೆಯನ್ನು ಹೊರಳಾಡಿಸಿ ಶ್ರಮದಾನದ ಕುರಿತು ಹೇಳುವುದರೊಂದಿಗೆ ಸ್ವತಃ ತಾವೇ ಕಾರ್ಯರೂಪಕ್ಕೆ ತಂದರು. ಇವರ ನಂತರದಲ್ಲಿ ಅನೇಕ ಸಂಘಟನೆಗಳು ಔಪಚಾರಿಕವಾಗಿ ಶ್ರಮದಾನದ ಹೆಸರಿನಲ್ಲಿ ಸಮಾಜದ ಮುಖ್ಯ ಭೂಮಿಕೆಗೆ ಬಂದವು. ಆದರೆ ಅವುಗಳ ಕಾರ್ಯಯೋಜನೆಯ ವ್ಯಾಪ್ತಿ ಬಹಳ ಸಂಕುಚಿತವಾಗಿತ್ತು.

ಶ್ರಮದಾನ ಮಾಡುವಲ್ಲಿ ಭಾರತದಲ್ಲಿ ಮತ್ತೊಂದು ಹೊಸ ಚಿಗುರು ಕೆಲವು ಸಿದ್ಧಾಂತಿಗಳ ಹಾಗೂ ಚಿಂತಕರ ಪ್ರೇರಣೆಯಿಂದ ಬೆಳೆದು ಬಂದಿತು. ಆ ಚಿಗುರು ಯಾವುದೇಂದರೇ “ರಾಷ್ಟ್ರೀಯ ಸೇವಾ ಯೋಜನಾ ಘಟಕ” . ಇದನ್ನು ಮೊದಮೊದಲು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ನೇತೃತ್ವದ ಧನಸಹಾಯ ಆಯೋಗವು ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ವಯಂ ಪ್ರೇರಿತ ರಾಷ್ಟ್ರೀಯ ಸೇವೆಯನ್ನು ಪರಿಚಯಿಸಲು ಶಿಫಾರಸ್ಸು ಮಾಡಿತು. 1958ರಲ್ಲಿ ಜವಾಹರ್ ಲಾಲ್ ನೆಹರುರವರು ಮುಖ್ಯಮಂತ್ರಿಗಳಿಗೆ ಪತ್ರ ಸಾಮಾಜಿಕ ಸೇವೆಯ ಕಲ್ಪನೆಯನ್ನು ಪದವಿಗಾಗಿ ಪೂರ್ವಾಪೇಕ್ಷಿತವಾಗಬೇಕೆಂದು ತಿಳಿಸಿದರು. ಮುಂದುವರೆದು ಶೈಕ್ಷಣಿಕ ಸಂಸ್ಥೆಗಳಲ್ಲಿ ರಾಷ್ಟ್ರೀಯ ಸೇವೆಯನ್ನು ಪರಿಚಯಿಸಲು ಸೂಕ್ತ ಯೋಜನೆಯನ್ನು ರೂಪಿಸುವಂತೆ ಅವರು ಶಿಕ್ಷಣ ಸಚಿವಾಲಯಕ್ಕೆ ನಿರ್ದೇಶನ ನೀಡಿದರು. ಈ ಎಲ್ಲಾ ಭಗೀರಥ ಪ್ರಯತ್ನಗಳಿಂದಾಗಿ ಮೇ 1969ರಲ್ಲಿ ಶಿಕ್ಷಣ ಸಚಿವಾಲಯ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಕರೆದಿದ್ದ ವಿದ್ಯಾರ್ಥಿ, ವಿದ್ಯಾರ್ಥಿ ಪ್ರತಿನಿಧಿಗಳು ಸರ್ವಾನುಮತದಿಂದ ರಾಷ್ಟ್ರೀಯ ಸೇವಾ ಯೋಜನೆಯು ರಾಷ್ಟ್ರೀಯ ಏಕೀಕರಣಕ್ಕೆ ಒಂದು ಸಾಧನವಾಗಬಹುದು ಎಂದು ಒಪ್ಪಿಕೊಂಡರು. ಮೊದಲ ಶಿಬಿರವನ್ನು ಜೂನ್ 7 1969 ರಂದು ಮುಕ್ತಾಯಗೊಳಿಸಲಾಯಿತು. ಕೆ.ಕೆ ಗುಪ್ತಾರವರನ್ನು ಮೊದಲ ಸ್ವಯಂ ಸೇವಕರನ್ನಾಗಿ ಘೋಷಿಸಲಾಯಿತು. ಸೆಪ್ಟಂಬರ್ 24 1969 ರಂದು ಅಂದಿನ ಕೇಂದ್ರ ಸಚೀವ ವಿ.ಕೆ .ಆರ್ವಿರಾವ್ ಅವರು ಎಲ್ಲಾ ರಾಜ್ಯಗಳ 37 ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರಾರಂಭಿಸಿದರು ಕಾಲಾಂತರದಲ್ಲಿ ಅದು ದೇಶಾದ್ಯಂತ ಹರಡಿತು.

‘ನನಗಾಗಿ ನಾನಲ್ಲ ನಿಮಗಾಗಿ ನಾನು’ ಎಂಬ ಧ್ಯೇಯ ವಾಕ್ಯದೊಂದಿಗೆ ‘ಸ್ವಚ್ಛಗೊಳಿಸುವಿಕೆ ಮತ್ತು ಅರಣ್ಯೀಕರಣ’ ಎಂಬ ಮುಖ್ಯ ಉದ್ದೇಶಗಳನ್ನು ಇಟ್ಟುಕೊಂಡು ಶ್ರಮದಾನ ಮಾಡುವುದು ರಾಷ್ಟ್ರೀಯ ಸೇವಾ ಯೋಜನೆಯು ತನ್ನ ದಾಪುಗಾಲನ್ನು ಇರಿಸಿತು. ತದ ನಂತರದಲ್ಲಿ ‘ಬರಗಾಲದ ವಿರುದ್ಧ ಯುವಕರು’ , ‘ಕೊಳಕು ಮತ್ತು ರೋಗದ ವಿರುದ್ಧ ಯುವಕರು’ , ‘ಯುವಕರು ರಾಷ್ಟ್ರೀಯ ಏಕೀಕರಣ ಮತ್ತು ಸಾಮಾಜಿಕ ಸಾಮರಸ್ಯಕ್ಕಾಗಿ’ , ‘ಗ್ರಾಮಿಣ ಪುನಃನಿರ್ಮಾಣಕ್ಕಾಗಿ ಯುವಕರು’ , ‘ಪರಿಸರ ಅಭಿವೃದ್ಧಿಗೆ ಯುವಕರು’ , ‘ಯುವ ಸಾಕ್ಷರತೆಗಾಗಿ ಯುವಕರು’ , ‘ಜಲಾಯನ ನಿರ್ವಹಣೆ ಮತ್ತು ತ್ಯಾಜ್ಯ ಭೂಮಿ ಅಭಿವೃದ್ಧಿಗೆ ವಿಶೇಷ ಗಮನವನ್ನು ಹೊಂದಿರುವ ಸುಸ್ಥಿರ ಅಭಿವೃದ್ಧಿಗಾಗಿ ಯುವಕರು’ , ‘ಆರೋಗ್ಯಕರ ಭಾರತಕ್ಕಾಗಿ ಆರೋಗ್ಯಕರ ಯುವಕರು’ ಎಂಬ ವಿಭಿನ್ನ ವಿವಿದೊದ್ದೇಶ ಕಾರ್ಯಕ್ರಮಗಳ ಮೂಲಕ ಸಮಾಜದ ಸುಸ್ಥಿತಿಗಾಗಿ ಶ್ರಮವಹಿಸುತ್ತಾ ಬಂದಿದೆ.

**ಉಪಸಂಹಾರ.**

ದೇಹದಾನ, ಕಣ್ಣುದಾನ, ಅನ್ನದಾನ ಇತ್ಯಾದಿ ದಾನಗಳಿಗಿಂತ ಶ್ರಮದಾನ ಎನ್ನುವುದು ವಿಭಿನ್ನವಾಗಿ ನಿಲ್ಲುತ್ತದೆ. ಅಂದರೇ ಅನ್ನ, ದೇಹ, ಹಾಗೂ ಕಣ್ಣು ಇತ್ಯಾದಿ ದಾನಗಳು ಕೇವಲ ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ

ಸಮಾನ ಸ್ಥಿತಿಯನ್ನ ಕಾಪಾಡುತ್ತದೆ. ಆದರೆ ಶ್ರಮದಾನ ಎನ್ನುವುದು ಇಡೀ ಪರಿಸರದ ಸಮತೋಲನಕ್ಕೆ ಹಾಗೂ ಸುಚಿತ್ವಕ್ಕೆ ನೇರವಾಗುತ್ತದೆ. ಇ ರೀತಿ ಶ್ರಮದಾನವನ್ನು ಮಾಡಲು ನನ್ನಂತ ಯುವ ಮನಸ್ಸುಗಳಿಗೆ ಸಿದ್ಧ ವೇದಿಕೆಯಾಗಿ 'ರಾಷ್ಟ್ರೀಯ ಸೇವಾ ಯೋಜನಾ' ಘಟಕ ನಿಂತಿದೆ.

## ಪರಾಮರ್ಶನ ಗ್ರಂಥಗಳು


[1] ನಾಗಲೋಟಿಮಠ. ಎಸ್. ಜೆ, ಸತ್ತ ಮೇಲೆ ಸಮಾಜ ಸೇವೆ, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, 2016.

[2] ವಸಂತ .ಅ. ಕುಲಕರ್ಣಿ, ದೇಹ ಕ್ರಿಯೆಯ ಸೋಜಿಗಗಳು, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ, 2018.

[3] ಶಂಕರ್ ರಾವ್.ಚ.ನ, ಭಾರತೀಯ ಸಮಾಜದ ಅಧ್ಯಯನ, ಜೈ ಭಾರತ್ ಪ್ರಕಾಶನ ಮಂಗಳೂರು, 2000.

[4] Panwar.j.d.s, Amit kumar Jain, Brijesh Kumar pathi (Co) National Service Scheme : A Youth Volunteers Programme, Daya Bublishing House New Delhi, 2016.